**ಸಿ ಸಿ ನಂ. 348/2018**

**ಡಿಡಬ್ಲ್ಯೂ - 2 ಜೆ ಮೈಕಲ್**

**ದಿನಾಂಕ 28-06-2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟಿ ಸವಾಲು : ಮಾನ್ಯ ಸ. ಸ. ಅ. ರವರಿಂದ**

ನಾನು ವಿಷ ಸೇವಿಸಿ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರವೂ ಸಹ ನಾನು ಹಿಂದೆ ಕೆಲಸ ಮಾಡುತ್ತಿದ್ದ ಸಂಘಕ್ಕೆ ಹೋಗಿರುವುದಿಲ್ಲ ಎಂದರೆ ಸರಿ. ಸದರಿ ಸಂಘದ ಗೋಡೌನ್ ನಲ್ಲ ಸರಕು ಕಡಿಮೆ ಇದ್ದ ಬಗ್ಗೆ ಸಂಘದ ಆಡಳಿತ ಮಂಡಳಿಯ ವಿಚಾರಣೆಯ ವೇಳೆ ನನಗೆ ಹಲವಾರು ಬಾರಿ ವಿವರಣೆ ಕೇಳಿ ನೋಟಿಸ್ ನ್ನು ನೀಡಿದ್ದರೂ ಸಹ ನಾನು ಆ ಬಗ್ಗೆ ವಿಚಾರಣೆಗೆ ಹೋಗಿರುವುದಿಲ್ಲ ಹಾಗೂ ವಿವರಣೆಯನ್ನು ಸಹ ನೀಡಿರುವುದಿಲ್ಲ ಸಾಕ್ಷಿಯು ಆ ಬಗ್ಗೆ ಆಗಲೇ ಕೇಸ್ ದಾಖಲಾದ ಕಾರಣ ನಾನು ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಆ ರೀತಿ ನೋಟಿಸ್ ಗೆ ಉತ್ತರವನ್ನು ನೀಡಿಲ್ಲ ಹಾಗೂ ವಿಚಾರಣೆಗೆ ಬಂದಿಲ್ಲ ಎಂಬ ಕಾರಣಕ್ಕಾಗಿ ದಿನಾಂಕ 18-03-2018 ರಂದು ಸಂಘದ ಆಡಳಿತ ಮಂಡಳಿಯವರು ನನ್ನನ್ನು ಕೆಲಸದಿಂದ ಅಮಾನತ್ತು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಆ ರೀತಿ ಅಮಾನತ್ತು ಮಾಡಿದ ಬಗ್ಗೆ ಹಾಗೂ ಸಂಘದ ಗೋಡೌನ್ ಲ್ಲಿ ಸರಕು ಕಡಿಮೆ ಇದ್ದ ಬಗ್ಗೆ ನನ್ನನ್ನು ವಿವರಣೆಯನ್ನು ಕೇಳಿ ದಿನಾಂಕ 18-04-2018 ರಂದು ಶಕ್ತಿ ದಿನಪತ್ರಿಕೆಯಲ್ಲಿ ಸಂಘದವರು ಪ್ರಕಟಣೆಯನ್ನು ಹೊರಡಿಸಿರುತ್ತಾರೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು 2 ಹಾಗೂ 3ನೇ ಆರೋಪಿಗಳೊಂದಿಗೆ ಶಾಮೀಲಾಗಿ ಸಂಘದ ಗೋಡೌನ್ ನಲ್ಲಿ ಕರಿಮೆಣಸನ್ನು ಕಳ್ಳತನ ಮಾಡಿ, ಮಾರಾಟ ಮಾಡಿದ್ದು, ಅದರಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ನಂತರ ನಾನು ಸಂಘಕ್ಕೆ ಕೆಲಸಕ್ಕೆ ಹೋಗಿರುವುದಿಲ್ಲ ಹಾಗೂ ಅವರು ಕೇಳಿದ ವಿವರಣೆಗೆ ಉತ್ತರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)
ಓ ಹೇ ಕೇ ಸ ಇದೆ.

ಸಹಿ/-
(ಸಂತೋಷ ಕೊಠಾರಿ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ